ಕಥೆ

# ಪಿಕ್ಕ ಅಲ್ಲ



**ಮುನವ್ವರ್ ಜೋಗಿಬೆಟ್ಟು**

ಕಲೆ: ಎಸ್. ವಿ. ಹೂಗಾರ್

'ಏಮಂಗ ಹಾಗಲ್ಲವಾ... ಹೀಗೆ ನೋಡು, ದೊಡ್ಡದಾಗಿ ಊದು...' ಎಂದು ಚೋಟುದ್ದ ಹುಡುಗ ತನ್ನ ಕೈಬೆರಳುಗಳನ್ನು ತುಟಿ ಬದಿಗೆ ಓರೆಯಾಗಿ ಇಟ್ಟು ಹೇಳುತ್ತಿದ್ದರೆ, 'ಓಯ್... ನಿನ್ನದೆಂಥದಾ, ಸೀನ್ ಗೀನೆಲ್ಲಾ ಬೇಡ ಆಯ್ತಾ... ನಾನೇ ಮೊದ್ಲು ನೋಡಿದ್ದು... ನನ್ಗೆ ಊದ್ಲಿಕ್ಕೆ ಕೊಡಾ' ಅಂಥ ಮತ್ತೊಬ್ಬ ಹುಡುಗ. ಅಲ್ಲಿದ್ದ ಬಹುತೇಕ ಹುಡುಗರ ಚಡ್ಡಿಯ ಬಟನ್‌ಗಳು ಬಿದ್ದು ಹೋಗಿದ್ದರಿಂದ ಅವರಿಗೆ ಬಲೂನು ನೋಡುವಾಗಲೂ ಚಡ್ಡಿಯ ಹರಿದ ಎಲಾಸ್ಟಿಕ್ಕು ಜಾರಿ ಬೀಳದಂತೆ ಒಂದು ಕೈಯಿಂದ ಭದ್ರವಾಗಿ ಹಿಡಿಯಲೇಬೇಕಿತ್ತು. ಸೂರ್ಯನು ಕಡಲ ಕೆನ್ನೆಗೆ ಹೋಲಿ ಬಣ್ಣ ಬಳಿದು ಅವರೋಹಣಕ್ಕೆ ಹೊರಟಿದ್ದ. ಕಡಲ ಕೊನೆಯಲ್ಲಿ ನಾಲ್ಕಾರು ಕಸದ ರಾಶಿಯಂತಹ ಹಡಗೋ, ದೋಣಿಯೋ ಆ ಊರ ಬದುಕಿನ ಹೊಟ್ಟೆ ಹೊರೆಯಲು ತೇಲಾಡುತ್ತಿತ್ತು. ತೀರದ ಮರಳ ಮೇಲೆ ಅವರ ಒಂದು ಮಳೆಗಾಲದಷ್ಟೇ ಆಯುಸ್ಸಿದ್ದ ಹೆಂಚು ಮತ್ತು ತಗಡು ಶೀಟಿನ ಮನೆಗಳು ಆ ಸಂಜೆಗೆ ವಿಚಿತ್ರ ಸೌಂದರ್ಯವನ್ನು ತಂದಿದ್ದವು. ಮರಳಿನಾಟದಲ್ಲಿ ತಲ್ಲೀನರಾದ ಮಕ್ಕಳು ಈಗಷ್ಟೇ ಅಲೆಗಳಲ್ಲಿ ಮಿಂದೆದ್ದು ಕಾಲ್ಚೆಂಡು ಒದೆಯುವ ಆಟ ಶುರುಮಾಡುವ ಮೊದಲು, ಬೆನ್ನ ಮೇಲಿಗಂಟಿದ ಮರಳನ್ನು ಒರೆಸಿಕೊಳ್ಳುವ ಮುನ್ನ, ಕಡಲ ಅಲೆಗಳು ಬದಿಗೆಸೆದ ಕಸದ ರಾಶಿಯಲ್ಲಿದ್ದ ಎಲ್ಲಿಂದಲೋ ಬಂದು ಸೇರಿದ ಬಲೂನೊಂದನ್ನು ಊದತೊಡಗಿದ್ದರು. ಒಬ್ಬ ಹುಡುಗನಂತೂ ತನ್ನ ಚಡ್ಡಿಯನ್ನು ಉಡಿದಾರಕ್ಕೆ ಸಿಕ್ಕಿಸಿಕೊಂಡು ಅರ್ಧ ಊದಿದ ಆ ಬಿಳಿಯ ಉದ್ದದ ಬಲೂನನ್ನು ಹಿಡಿದು ಇತರರಿಗೆ ತೋರಿಸುತ್ತಾ, ಬಾಯಿಗೆ ಅಂಟಿದ ಬಲೂನಿನ ಲೋಳೆಯನ್ನು ಒರೆಸಿಕೊಳ್ಳುತ್ತಾ, 'ಇದಕ್ಕೆ ನೀರು ತುಂಬಿಸಿ ನೋಡಣ್ವಾ? ಎಷ್ಟು ನೀರು ಹಾಕಿದ್ರೂ ಇದು ಒಡೆಯುವುದಿಲ್ಲ. ಕಳೆದ ಸಲ ಇಂತದ್ದೇ ಬಲೂನಿಗೆ ನೀರು ಹಾಕಿ ನೋಡಿದ್ದೀವಿ' ಅಂತ ತನ್ನ ಕುತೂಹಲವನ್ನು ಇತರರಿಗೆ ಹೇಳಿಕೊಂಡ.

'ಎಂಥ ಮಾರಾಯ... ನೀನು ಬಿಡುವ ರೈಲು ನಮಗೆ ಗೊತ್ತಿಲ್ಲದೆಯಾ...'

'ಏಯ್ ನೀನು ಹೋಗಾ? ಮೊದ್ಲು ಗೊತ್ತಿದ್ದು ಮಾತಾಡ್ಬೇಕು'

'ಓಯ್ ಬನ್ನಿ ಇಲ್ಲಿ, ನೀರು ಎಷ್ಟು